Reg.No. M. 1550.
KODAGU" MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೧೬—೨—೧೯೪೫ನೇ ಶುಕ್ರವಾರ. | ಸಂಚಿಕೆ ೩೭

ಕಸ್ತೂರ್‌ಬಾರ ಪುಣ್ಯತಿಥಿ.

— ಲೇ:-'ವಸು' —

——()——

'ಮಾನವನು ಹುಟ್ಟುವಾಗ ಅಳುತ್ತಾ ಹುಟ್ಟುತ್ತಾನೆ. ತಾನು ಸಾಯುವಾಗ ಇತರರನ್ನು ಅಳುವಂತೆ ಮಾಡಬೇಕು' ಎಂಬುದೊಂದು ನಾಣ್ನುಡಿಯಿದೆ. ಇತರರು ತನಗಾಗಿ ಅಳುವಂತೆ ಮಾಡುವದೆಂದರೆ ಬೇರೊಬ್ಬರು ನನಗಾಗಿ ಸುಮ್ಮನೆ ಅಳಲಾರರು. ನಮ್ಮ ಅಗಲಿಕೆಯಿಂದ ಅವರಿಗೆ ನಷ್ಟವಾಗುವದಾದರೆ ಅಳುತ್ತಾರೆ. ಹಾಗೆಯೇ ಒಂದು ರಾಷ್ಟ್ರ ಒಂದು ಜನಾಂಗ ಒಂದು ವ್ಯಕ್ತಿಗಾಗಿ ಅಳಬೇಕಾದರೆ ಆ ವ್ಯಕ್ತಿ ಜನಾಂಗದ, ರಾಷ್ಟ್ರದ ಪ್ರಗತಿಗೆ ಬಹುಮಟ್ಟಿಗೆ ದುಡಿದಿರಬೇಕ; ಆ ಸಮಾನ ತ್ಯಾಗಮಾಡಿರಬೇಕು. ಅಂಥಾ ವ್ಯಕ್ತಿಯು ಕಣ್ಮರೆಯಾದಾಗ ಇಡೀ ರಾಷ್ಟ್ರ ಕಂಬನಿಮಿಡಿಯುತ್ತದೆ. ಸಜ್ಜನರ ಜೀವನದ ಮರ್ಮವೇ ಇದು. ಅವರು ತಮಗಾಗಿ ಬದುಕುವದಲ್ಲ. ಅವರು ಬದುಕಿದರೆ ಎಡಬಲದವರೂ ಬದುಕುವದಕ್ಕೆ ಸಹಾಯಕವಾಗುತ್ತದೆ. ಅನ್ಯರು ಮೃತರಾದರೂ ಅವರ ಜೀವನ ಕಥೆಯು ಎಡಬಲದವರಿಗೆ ಮಾರ್ಗದರ್ಶಕವಾಗುತ್ತದೆ. ಮಾನ್ಯಮೂರ್ತಿಯಾಗಿದ್ದ ಕಸ್ತೂರ್‌ಬಾರವರು ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿ ಒಂದು ವರ್ಷವಾಯಿತು. ಅವರ ಪುಣ್ಯತಿಥಿಯ ಆಚರಣೆಯು ತಾ. 11 ರಿಂದ 18 ರ ವರೆಗೆ ಇಡೀ ಭರತಖಂಡದ ಉದ್ದಗಲಕ್ಕೂ ಆಚರಿಸಲ್ಪಡುತ್ತಿದೆ.

"ಕಸ್ತೂರ್‌ಬಾರವರ ಜೀವನ, ಗೋಹ್ಯವಾದ ಜೀವನ. ಮಹಾತ್ಮಗಾಂಧೀಜಿಯವರ ಜೀವನಯಾತ್ರೆಯಲ್ಲಿ ಅವರ ನೆರಳಿನಂತಿದ್ದು ಸಹಿಸಲಾರದ ಕಷ್ಟವನ್ನು, ಎಣೆಯಿಲ್ಲದ ತ್ಯಾಗವನ್ನು ಮಾಡಿದ್ದಾರೆ. ಆದರೆ ಮಹಾತ್ಮಗಾಂಧೀಜಿಯವರ ಮಹಾ ಮೇರುವಿನಂಥಾ ವ್ಯಕ್ತಿತ್ವದ ಮರೆಯಲ್ಲಿದ್ದುದರಿಂದ ಬಹಿರ್ಜಗತ್ತಿಗೆ ಅವರ ಪ್ರತಿಭೆಯು ಗೋಚರವಾಗಿರಲಿಲ್ಲ. ಗಂಧವು ತನ್ನನ್ನು ತಾನು ತೇದು ಸವೆಯಿಸಿಕೊಂಡಾಗಲೇ ಕಮನೀಯವಾದ ಕಂಪನ್ನು ಕೊಡಬಲ್ಲುದು. ಇನಿದಾದ ಕಬ್ಬು ನುಚ್ಚುನುರಿಯಾಗಿ ಜಜ್ಜಲ್ಪಟ್ಟರೇನೆ ಮನತಣಿಸುವ ರಸವನ್ನು ಕೊಡಲಾಪುದು. ಅದೇ ರೀತಿ ಕಸ್ತೂರ್‌ಬಾರವರು ರಾಷ್ಟ್ರಸೇವೆಯಿಂದ ತನ್ನ ಪಾರ್ಥಿವ ಶರೀರವನ್ನು ಜೈಲಿನಲ್ಲಿ ಬಲಿಕೊಟ್ಟಾಗಲೇ ಇಡೀ ಜಗತ್ತಿನ ದೃಷ್ಟಿ ಆ ಕಡೆಗೆ ಹೋಗಿತು. ಗುಪ್ತವಾಗಿದ್ದ ಆ ಪವಿತ್ರ ಜೀವನ ಸೌರಭವನ್ನು ನೋಡಿ ಮುಗ್ಧವಾಯಿತು. ಹಿಂದೂ ದೇಶದ ಆದರ್ಶವನಿತೆಯೂಗಿ, ರಾಷ್ಟ್ರಸೇವಿಕೆಯರ ಕಣ್ಮಣಿಯೂಗಿ, ಪವಿತ್ರಗೃಹಿಣಿಯರ ಮಾರ್ಗದರ್ಶಿಕೆಯೂಗಿ, ಸೀತಾ, ಸಾವಿತ್ರಿ, ದಮಯಂತಿಯಂಥಾ ತಾರೆಯೂಗಿ, ಜಗತ್ತಿನ ಅದ್ವಿತಿಯ ವ್ಯಕ್ತಿಯ ಪತ್ನಿಯೂಗಿ ಕಣ್ಮರೆಯಾದ ಮೂತೆ ಕಸ್ತೂರ್‌ಬಾಳ ಪುಣ್ಯಸ್ಮರಣೆಯು ಭಾರತೀಯರನ್ನು ಬಡಿದೆಬ್ಬಿಸುತ್ತಿದೆ. ಆಕೆಯು ಸೆರೆಮನೆಯಲ್ಲಿ ಶರೀರವನ್ನು ತೊರೆದ ನೆನಪು ಭಾರತೀಯರ ದಾಸ್ಯದ ಪರಿಚಯವನ್ನು ಇನ್ನಷ್ಟು ಮಾಡಿಸುತ್ತಿದೆ. ಆಕೆಯು ರಾಷ್ಟ್ರದ ಸೇವೆಯಲ್ಲಿ ತನುವನ್ನು ಧಾರೆಯೆರೆದ ಆದರ್ಶವು ಭಾರತೀಯರಿಗೆ ಯೋಗ್ಯ ಪಾಠವಾಗಿದೆ.

ಕಸ್ತೂರ್‌ಬಾರವರ ಪುಣ್ಯತಿಥಿಯ ಆಚರಣೆಯು ಸುಲಭದ ವಿಚಾರವಲ್ಲ. ಸಭೆಯಲ್ಲಿ ನಿಂತು ಸಂತಾಪಸೂಚಿಸಿ 'ದೇವರು ಮೃತರ ಆತ್ಮಕ್ಕೆ ಶಾಂತಿಕೊಡಲೆಂದು' ಪ್ರಾರ್ಥಿಸಿದರೆ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗಲಿಲ್ಲ. ಕಸ್ತೂರ್‌ಬಾರೆಂದರೆ ಮಹಾತ್ಮಗಾಂಧಿಯವರು. ಮಹಾತ್ಮಗಾಂಧೀಜಿಯವರೆಂದರೆ ಕಸ್ತೂರ್‌ಬಾರವರು. ಹೀಗಿರುವಾಗ ಮಹಾತ್ಮರ ಆದೇಶದಂತೆ ಈ ದಿನವು ಆಚರಿಸಲ್ಪಡಬೇಕು.

ಕಸ್ತೂರ್‌ಬಾರವರ ಪ್ರಭಾವ ಹಿಂದೂ ದೇಶದಲ್ಲಿಯೂ ಎಷ್ಟರ ಮಟ್ಟಿಗೆ ಇದೆಯೆಂಬುದು ಅವರ ಸ್ಮಾರಕನಿಧಿಯ ಬಗ್ಗೆ 75 ಲಕ್ಷ ಹಣ ಶೇಕರಿಸಬೇಕೆಂದಿದ್ದದ್ದು ಅನಾಯಾಸವಾಗಿ 124 ಲಕ್ಷಕ್ಕೆ ಮಿಕ್ಕಿದ್ದರಿಂದಲೇ ಗೊತ್ತಾಗುತ್ತದೆ. ಮಹಾತ್ಮಗಾಂಧೀಜಿಯವರು ಮತ್ತು ಈ ನಿಧಿಯ ಕಾರ್ಯಕರ್ತರು ಈ ಹಣವನ್ನು ಸ್ತ್ರೀಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಅರ್ಥಾತ್ ರಾಷ್ಟ್ರರಚನಾಕಾರ್ಯಕ್ಕಾಗಿ ವಿನಿಯೋಗಿಸಲು ನಿರ್ಧರಿಸಿದ್ದಾರೆ. ರಾಷ್ಟ್ರರಚನಾಕಾರ್ಯದಲ್ಲಿಯೇ ತನಗೆ ತೃಪ್ತಿ, ಸಂತೋಷವೆಂದು ಮಹಾತ್ಮರು ನುಡಿದಿದ್ದಾರೆ. ಇದೇ ಕಣ್ಮರೆಯಾದ ಕಸ್ತೂರ್‌ಬಾರವರಿಗೂ ಪ್ರಿಯವಾದ ಕೆಲಸ. ಗಾಂಧೀಜಿಯವರು ಜೈಲಿನಿಂದ ಬಿಡುಗಡೆಯಾದ ನಂತರ ವಿಧಾಯಕ ಕಾರ್ಯಕ್ರಮದ ಬಗ್ಗೆ ತಮ್ಮ ಪೂರ್ಣವಚಸ್ಸನ್ನು ಹಾಕಿದ್ದಾರೆ. ವಿಧಾಯಕ ಕಾರ್ಯಕ್ರಮವೇ ಕಾಂಗ್ರೆಸಿಗರ ಜೀವಾಳವೆಂದು ಮೇಲಿಂದ ಮೇಲೆ ಸಾರಿದ್ದಾರೆ. ಆಂದಮೇಲೆ ನಾವು ಕಸ್ತೂರ್‌ಬಾ ಸ್ಮಾರಕವನ್ನು ನಿತ್ಯಕೂಪದಿಂದ ಮಾಡುವವರಾಗಿದ್ದರೆ ದೇಶದ ಏಳಿಗೆಗೆ ಕಾರಣವಾಗುವ ವಿಧಾಯಕ ಕಾರ್ಯಕ್ರಮವನ್ನು ಕೈಕೊಳ್ಳುವ ನಿರ್ಧಾರಮಾಡಬೇಕು. ಇತರ ಔಷಧೋಪಚಾರಿಕ ಕಾರ್ಯಕ್ರಮಗಳನ್ನು ಬಿಟ್ಟುಬಿಡಬೇಕೆಂದಲ್ಲ. ಅವುಗಳನ್ನು ಒಂದು ವೇಳೆ ಬಿಟ್ಟರೂ ಅದಕ್ಕಾಗಿ ಕಸ್ತೂರ್‌ಬಾರವರ ಆತ್ಮವು ಚಿಂತಿಸಲಿಕ್ಕಿಲ್ಲ. ಆದರೆ ಅವರ ಆತ್ಮದ ಆಶಯವಾದ ವಿಧಾಯಕ ಕಾರ್ಯಕ್ರಮವನ್ನು ಮಾತ್ರ ಯಾರೂ ದುರ್ಲಕ್ಷಿಸಲಾಗದು. ಇದೇ ಕಸ್ತೂರ್‌ಬಾರವರಿಗೆ ಪ್ರಿಯವಾದುದು. ಮಹಾತ್ಮಗಾಂಧಿಜಿಯವರಿಗೆ ಪ್ರಿಯವಾದುದು. ಹಿಂದೂದೇಶದ ಹಿತಸಾಧನೆಗೆ ಅಗತ್ಯವಾದುದು.

ಬಾರವರು ಪುಣ್ಯತಿಥಿಯ ಈ ಕಾಲದಲ್ಲಿ ನಾವು ಅವರ ಅಮೂಲ್ಯ ತ್ಯಾಗ ಜೀವನವನ್ನು ನೆನೆದು ಕಾರ್ಯೋನ್ಮುಖರಾಗುವಾ. ಅವರು ಯಾವ ಧ್ಯೇಯಕ್ಕಾಗಿ ಜೀವಿಸಿದರೋ, ಯಾವ ಧ್ಯೇಯಕ್ಕಾಗಿ ಸೆರೆಮನೆಯಲ್ಲಿ ಶರೀರ ತ್ಯಜಿಸಿದರೋ ಆ ಧ್ಯೇಯವು ಭಾರತೀಯರ ಮನಸ್ಸಿನಿಂದ ಮರೆಯಾಗದಿರಲಿ. ದೇಶಕ್ಕಾಗಿ ಅಳಿದ ವೀರ ವಿದುಷಿಯರ ಸಾಲಲ್ಲಿ ಹುಟ್ಟಿರುವ ನಾವು ಅವರ ಕೀರ್ತಿಗೆ ತಕ್ಕಂತೆ ದೇಶಕಾಗಿ ಶ್ರಮಿಸುವಂತಾಗಲಿ.

ಜರ್ಮನಿಯನ್ನು ಹಂಚಿಕೊಳ್ಳಬೇಕು

ಮಿತ್ರರಾಷ್ಟ್ರಗಳ ಮುಂದಾಳುಗಳಾದ ಚರ್ಚಿಲ್, ರೂಸ್‌ವೆಲ್ಟ್ ಮತ್ತು ಸ್ಟಾಲಿನರು ಕ್ರಿಮಿಯಾದ್ವೀಪದ ಯಾಲ್ಟಾ ಎಂಬಲ್ಲಿ ಸೇರಿ ಎಂಟು ದಿನಗಳ ವರೆಗೆ ಮಿಟಿಂಗು ನಡೆಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬಂದಿರುವರು—

(1) ಜರ್ಮನಿಯು ಶರಣಾಗತವಾಗಲು ಬೇಕಾದ ಶರತ್ತುಗಳನ್ನು ಒಪ್ಪಲಾಗಿದೆ. ಈ ಮೂರು ಶಕ್ತಿಗಳು ಜರ್ಮನಿಯ ಪ್ರತ್ಯೇಕ ಭಾಗಗಳನ್ನು ಪ್ರಾಂತಾವಾರು ಆಕ್ರಮಿಸಿಕೊಳ್ಳುವದು. ತನಗೆ ಬೇಕಾದ ಭಾಗವನ್ನು ಆಕ್ರಮಿಸಿಕೊಳ್ಳುವಂತೆ ಫ್ರಾನ್ಸನ್ನು ಆಹ್ವಾನಿಸುವದು. ಜರ್ಮನಿಯು ಎಲ್ಲಾ ಮಿಲಿಟರಿ ಶಕ್ತಿಯನ್ನು ಹುರಿದುಹಂಚಿ ಅದು ಎಂದೂ ಮಿಲಿಟರಿ ದೃಷ್ಟಿಯಿಂದ ತಲೆಯೆತ್ತದಂತೆ ಮಾಡುವೆದು. ಜರ್ಮನಿಯಲ್ಲಿಯು ನಾಝಿ ಪಕ್ಷವನ್ನು ಸಮೂಲನಾಶಮಾಡುವದು.

(2) ಸಂಯುಕ್ತ ರಾಷ್ಟ್ರಗಳ ಸಮ್ಮೇಳನ ಒಂದು ಬರುವ ವರ್ಷದ ಏಪ್ರಿಲ್ ತಿಂಗಳಲ್ಲಿ ಸೇರಿ ಶಾಂತಿಯ ಮತ್ತು ಭದ್ರತೆಯ ಕೌಲನ್ನು ಡಂಬರ್ಟನ್ ಓಕ್ಸ್ ಮಾತುಕತೆಗನುಸಾರ ರೂಪಿಸುವದು.

(3) ಲೂಬ್ಲಿನ್‌ನಲ್ಲಿರುವ ಪೋಲೆಂಡ್ ಸರಕಾರವನ್ನು ಪುನರ್ವ್ಯವಸ್ಥೆಗೊಳಿಸಿ ಪೋಲೆಂಡಿನ ಪ್ರಜಾಪ್ರಭುತ್ವ ಮುಂದಾಳುಗಳು ಅದರಲ್ಲಿ ಸೇರ್ಪಡೆಯಾಗುವಂತೆ ಮಾಡುವದು. ಪೋಲೆಂಡಿನ ಪೂರ್ವಭಾಗದಲ್ಲಿ ಕರ್ಝನ್‌ಲೈನಿನ ವರೆಗಿನ ಪ್ರದೇಶವು ರಷ್ಯಾಕ್ಕೆ ಸೇರಬೇಕು. ಅದಕ್ಕೆ ಸರಿಯಾಗಿ ಬೇರೆ ಪ್ರದೇಶವನ್ನು ಪೋಲೆಂಡಿಗೆ ಕೊಡಲಾಗುವದು.

ಜರ್ಮನ್ ಜನತೆಯನ್ನು ನಾಶಮಾಡುವದು ತಮ್ಮ ದೃಷ್ಟಿಯಲ್ಲವೆಂದು ಈ ಮೂವರು ಹೇಳಿದ್ದಾರೆ.

— ಶೇಲಡಾ —

ಎಂಟಿ ಮಲೇರಿಯಾ ಜನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರ ಗಡ್ಡೆ, ತಜ್ಜನ್ಯ ಆಶಕ್ತತೆ ಮೇಲೆ ರಾಮಬಾಣ; ಲಿವರ, ಹೊಟ್ಟೆನೋವು, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ ಕ್ವಿನೈನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ಉಪಯೋಗಿಸುವರು, 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0. ಈ ಔಷಧಿಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮಾರಾಟಕ್ಕೆ ಏಜೆಂಜರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,

ಶಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು—

ಎಸ್. ಎಲ್. (ಅಪ್ಪುರಾವ್) ಧಾಕಪ್ಪ,

ಬಡವರ ಔಷಧಿ ಸರ್ವಿಸ್,

ಶಿರ್ಸಿ, ಉತ್ತರ ಕನ್ನಡ

ಕೊ ಡ ಗು

ತಾ. ೧೬-೨-೧೯೪೫ನೇ ಶುಕ್ರವಾರ

ನಾ ಚಿ ಕೆ ಗೇ ಡು.

ಕೊಡಗಿನ ಒಟ್ಟು ಆದಾಯವು ಸುಮಾರು 18 ಲಕ್ಷ ರೂಪಾಯಿಗಳು. ಇದರಲ್ಲಿ ಎಕ್ಸೈಸ್ ಅಂದರೆ ಸೇಂದಿ, ಸಾರಾಯಿ, ಗಾಂಜ ಮೊದಲಾದ ಮಾದಕ ಪದಾರ್ಥಗಳ ಮಾರಾಟದಿಂದ ಬರುವ ಉತ್ಪತ್ತಿ ಸುಮಾರು 6 ಲಕ್ಷ ರೂಪಾಯಿಗಳು! ಹಾಗಂದರೇನು? ಕೊಡಗು ಕುಡುಕರ ನಾಡಾಗಿದೆ. ಕುಡಿಯುವದೇ ಕೊಡಗರ ಜೀವನ ಧ್ಯೇಯವಾಗಿದೆ. ಕೇವಲ ಒಂದುವರೆಲಕ್ಷ ಜನಸಂಖ್ಯೆಯಿರುವ ನಾಡಿನಲ್ಲಿ ಸರಕಾರಕ್ಕೆ ಆರುಲಕ್ಷ ರೂಪಾಯಿಗಳ ಆದಾಯ ಈ ಮಾದಕ ಪದಾರ್ಥಗಳಿಂದಾಗಿ! ಕೊಡಗಿನಲ್ಲಿ 45 ರಿಂದ 50 ಸಾವಿರಕ್ಕೂ ಮಿರಿ ಸಾರಾಯಿ ಒಂದೇ ಖರ್ಚಾಗುತ್ತಿದೆಯಂತೆ. 'ಪಾನನಿರೋಧದ ಬಗ್ಗೆ ಪ್ರಚಾರವೇಕೆ? ನಾವೇ ಕುಡಿದು ಮುಗಿಸಿಬಿಟ್ಟರುವೆವು' ಎನ್ನುವಷ್ಟರ ಮಟ್ಟಿಗೆ ಜನತೆಯ ಮನೋಭಾವ ಕೆಳಗಿಳಿದಿದೆ. ಈ ರೀತಿಯ ಒಂದು ಅಧಃಪತನ ಹಿಂದೂದೇಶದ ಯಾವ ಭಾಗದಲ್ಲೂ ಅಗಿರಲಿಕ್ಕಿಲ್ಲ. ತಾ. 9-2-45 ರಲ್ಲಿ ಉತ್ತರಕೊಡಗಿನ ಸೇಂದಿ ಸಾರಾಯಿ ಅಂಗಡಿಗಳ ಹರಾಜು ನಡೆಯಿತು. ಉತ್ತರಕೊಡಗಿನಲ್ಲಿ ಈ ವರ್ಷ ಕಳೆದ ವರ್ಷಕ್ಕಿಂಥಾ ಮುಕ್ಕಾಲು ಲಕ್ಷ ರೂಪಾಯಿ ಆದಾಯ ಹೆಚ್ಚಾಗಿದೆ. ಇದು ಕೇವಲ ಉತ್ತರಕೊಡಗಿನಲ್ಲಿ! ಇದು ವ್ಯಸನಪಡಬೇಕಾದ ವಿಷಯ. ಕಂಟ್ರಾಕ್ಟುದಾರರು ಯಾವ ಧೈರ್ಯದಿಂದ ಈ ರೀತಿ ವರ್ಷೇ ವರ್ಷೆ ಹೆಚ್ಚಿನ ಬೆಲೆಗೆ ಅಂಗಡಿಗಳನ್ನು ಕೂಗುತ್ತಿರುವದು? ಒಂದು, ಬೇಕಾದಷ್ಟು ಜನರು ಬಂದು ಸಾರಾಯಿ ಖರ್ಚಾಗುತ್ತದೆಂಬ ಭರವಸೆ ಮತ್ತೊಂದು ಸಾರಾಯಿ ಸಾಕಷ್ಟು ಇಲ್ಲದಿದ್ದರೂ ನೀರು ಸೇರಿಸಿ ದುಡ್ಡುಗಳಿಸಿಯೇನೆಂಬುದು. ಇಲ್ಲದಿದ್ದರೆ ಕಳೆದ ವರ್ಷ ರೂ. 17000 ಹೋದ ಅಂಗಡಿ ಈ ವರ್ಷ 31000 ಹೊಂದುದರ ಅರ್ಥವೇನು? ಜನರ ತಲೆ ತಿರುಗಿದೆ. ಕಳ್ಳೇ ಅವರ ಜೀವನ ಸರ್ವಸ್ವವಾಗಿದೆ. ಆದ್ದರಿಂದ ಹೇಗೂ ನಮ್ಮ ಜೇಬುತುಂಬುವದರಲ್ಲಿ ಸಂಶಯವಿಲ್ಲವೆಂಬ ಭರವಸೆ ಕಂಟ್ರಾಕ್ಟುದಾರರಿಗೆ ಇದ್ದೇ ಇರಬೇಕು. ಇಲ್ಲದಿದ್ದರೆ ಹೀಗೆ ವರ್ಷೆ ವರ್ಷೆ ಅಬ್ಕಾರಿ ಆದಾಯವು ಹೆಚ್ಚಲು ಬೇರೆ ಕಾರಣವಿಲ್ಲ. ಇದು ಜನರ ಆಧೋಗತಿಯ ಚಿಹ್ನೆಯೊಂದಲ್ಲ; ಜನತೆಯ ಸಂಸ್ಕೃತಿಯ, ನಾಡಿನ ಅವನತಿಯ ಚಿಹ್ನೆ.

ಕೊಡಗು ನಾಡಿನ ಮಹನೀಯರು ಈ ರೀತಿ ಕುಡುಕರಾಗಬಾರದು. ಸರಕಾರವೂ ತನಗೆ ಆದಾಯಬರುತ್ತಿದೆಯೆಂದು ತೃಪ್ತಿಗೊಂಡು ಜನಾಂಗದ ನೈತಿಕ ಅಧಃಪತನದ ನಿವಾರಣೆಗೆ ಕಿರುಬೆರಳನ್ನು ಅಲ್ಲಾಡಿಸದೆ ಇರುವದು ತಪ್ಪು. ಜನರ ನೈತಿಕ ಅಧಃಪತನಕ್ಕೆ ಸಹಾಯಕರಾಗಿ ಅದರ ಲಾಭದಿಂದ ಪುನಹ ಅವರನ್ನು ಮೇಲೆತ್ತಲು ಯತ್ನಿಸುವ ಪ್ರಯತ್ನಕ್ಕೆ ಧಿಕ್ಕಾರವಿರಲಿ. ಜನತೆಯು ತಮ್ಮ ಜವಾಬ್ದಾರಿಯನ್ನರಿತುಕೊಳ್ಳಬೇಕು. ಪಾನನಿರೋಧ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಸರಕಾರವು ಜನಹಿತ ಸರಕಾರವೆಂದುಕೊಳ್ಳುವದಾದರೆ ಅದಕ್ಕೆ ಬೆಂಬಲಕೊಡಬೇಕು. ಕೊಡಗಿನ ಪ್ರತಿ ಗ್ರಾಮಗಳಲ್ಲಿಯೂ ಪಾನನಿರೋಧ ಸಮಿತಿಗಳನ್ನು ನೇಮಿಸಿ ಪ್ರಚಾರಮಾಡುವದು, ಮದುವೆ ಮುಂಜಿಗಳಲ್ಲಿ ಸಾರಾಯಿ ಸೇರಿಸದಂತೆ ಮಾಡುವದು, ಸೇರಿಸುವ ಮದುಮೆಗಳಲ್ಲಿ ಊಟಮಾಡದೆ ಅಸಹಕರಿಸುವದು ಮೊದಲಾದುವನ್ನು ಕೈಕೊಳ್ಳಬೇಕು. ಸಮಾಜ ಸುಧಾರಕರೂ, ಸರಕಾರವೂ ಕೊಡಗು ಇಂದು ಬಿದ್ದಿರುವ ಅಧಃಪತನದಿಂದ ಮೇಲೆತ್ತಲು ಪ್ರಯತ್ನಿಸಬೇಕು. ಕೊಡಗು ಕುಡುಕರ ನಾಡಲ್ಲ; ಅದಕ್ಕೂ ಒಂದು ನೀತಿ ಸಂಸ್ಕೃತಿಯಿದೆಯೆಂಬುದನ್ನು ತೋರಿಸಬೇಕು.

ಅನಾಸಕ್ತಿಯನ್ನು ಬಿಡಬೇಕು.

ಕೊಡಗಿನ ಜಾನುವಾರಗಳಿಗೆ ದೊಡ್ಡ ರೋಗ ತಗಲದಂತೆ ಖಡ್ಡಾಯವಾದ ಇಂಜೆಕ್ಷನ್ ಮಾಡುವ ಖಾನೂನು ಜಾರಿಗೆ ಬಂದು ತಿಂಗಳುಗಳಾದವು. ಆದರೆ ಕೊಡಗಿನಲ್ಲಿ ಈ ವರೆಗೆ ಕೇವಲ 'ಗೋಟ್ ಪಿಶ್ಯೂವೇಕ್ಸಿನೆ'ನ್ನೇ ಉಪಯೋಗಿಸಿದ್ದಾಗಿದೆ. ಈ ವೇಕ್ಸಿನನ್ನು ಇಟ್ಟುಕೊಳ್ಳಲು ಯೋಗ್ಯ ಸಲಕರಣೆಗಳಿಲ್ಲದಿದ್ದರೆ ಅದು ನಿಷ್ಪ್ರಯೋಜಕವಾಗುತ್ತದೆಂದು ತಜ್ಞರ ಅಭಿಪ್ರಾಯವಿದೆ. ಕೊಡಗಿನಲ್ಲಿ ಇದನ್ನು ಭದ್ರವಾಗಿ ಇಟ್ಟುಕೊಳ್ಳಲು ಯಾವ ಏರ್ಪಾಡೂ ಇಲ್ಲ. ಅದು ಮುಕ್ತೇಶ್ವರದಿಂದ ಇಲ್ಲಿಗೆ ಬಂದು ತಲಪುವಾಗಲೇ ಉಪಯೋಗಿಸಲು ಅನರ್ಹವಾಗಿರುತ್ತದೆಂದೂ ಅವರ ಅಭಿಪ್ರಾಯ. ಆದಕ್ಕಾಗಿ ಬೆಂಗಳೂರಿನಲ್ಲಿ ತಯಾರಿಸುವ 'ಗೋಟ್ ಬ್ಲಡ್ ವಿರಸ್'ನು ಉಪಯೋಗಿಸುವದು ಉತ್ತಮವೆಂದು ಅವರು ಸೂಚಿಸಿದ್ದಾರೆ. ಇಂಥಾ ಸೂಚನೆಗಳು ಬಂದರೂ ಸರಕಾರವು ಸಂಬಂಧವಿಲ್ಲದಂತೆ ನಿರ್ಲಿಪ್ತವಾಗಿರುವದು ಯೋಗ್ಯವಲ್ಲ. ಕೊಡಗು ವೆಟೆರ್‌ನರಿ ಇಲಾಖಾ ಸಂಘದವರು ತಮ್ಮ ಕಳೆದೊಂದು ವಿಠಂಗಿನಲ್ಲಿ ಕೊಡಗಿನಲ್ಲಿ ಇವೆರಡು ವೇಕ್ಸಿನುಗಳನ್ನೂ ಉಪಯೋಗಿಸಿ ಪರೀಕ್ಷೆ ಮಾಡುವ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಿದ್ದರು. ಸರಕಾರವು ಅಂಥಾ ಏರ್ಪಾಡನ್ನು ಮಾಡಿ ಕೊಡಗಿನ ಯಾವ ವೇಕ್ಸಿನು ಉಪಯೋಗಕ್ಕೆ ಅರ್ಹವೆಂಬುದನ್ನು ನಿಶ್ಚಯಿಸಿ ಅದನ್ನು ಉಪಯೋಗಿಸಬೇಕು. ಆಗ ಜನತೆಗೂ ಈ ಕಾರ್ಯದಲ್ಲಿ ಒಂದು ನಂಬಿಕೆ ಬಂದು ಸರಕಾರದ ಯೋಜನೆಯು ಯಶಸ್ವಿಯಾಗುವದು.

ಖಡ್ಡಾಯ ಇಂಜೆಕ್ಷನಿನ ಯೋಜನೆಯನ್ನು ಏರ್ಪಡಿಸಿ ದೈತನಿಂದ ಜಾನುವಾರಕ್ಕೆ ಎರಡಾಣೆಯಂತೆ ವಸೂಲ್ಮಾಡುತ್ತಿರುವದು ವಿಷಾದದ ಸಂಗತಿ. ಯಾವ ಆರ್ಥಿಕ ತತ್ವಕ್ಕೂ ಇದು ಸರಿಹೋಗದು. ಸರಕಾರವು ಈ ಫೀಜನ್ನು ಮನ್ನಾಮಾಡಬೇಕಾಗಿದೆ. ಸರಕಾರವು ಅತಿ ಪ್ರಾಮುಖ್ಯ ಸಮಸ್ಯೆಯಾದ ಜಾನುವಾರುಗಳ ಹಿತರಕ್ಷಣೆಯ ಬಗ್ಗೆ ತನ್ನ ಅನಾಸಕ್ತಿಯನ್ನು ಬಿಟ್ಟು ಕಾರ್ಯಪ್ರವರ್ತರಾಗಬೇಕಾಗಿ ನಮ್ಮ ಆಶಯ.

ವ ರ್ತ ಮಾ ನ.

'ಕೊಡವರ ಅಂತರ್ಜಾತಿ ವಿವಾಹ' ಎಂಬ ವಿಶಯದಲ್ಲಿ ಅತ್ಯುತ್ತಮವಾದ ಪ್ರಬಂಧಬರೆದ ಕೊಡವರಿಗೆ ರೂಪಾಯಿ 30 ರ ಬಹುಮಾನ ಒಂದನ್ನು ಕೊಡುವ ಏರ್ಪಾಡನ್ನು ಮೇಜರ್ ಕೋಟೆರ ಅಪ್ಪಣ್ಣನವರು ಮಾಡಿದ್ದಾರೆ. ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಪ್ರಬಂಧವನ್ನು 15-5-45 ರೊಳಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಧ್ಯಾಯರಿಗೆ ತಲುಪುವಂತೆ ಕಳುಹಿಸಬೇಕಾಗಿ ತಿಳಿಯಬರುತ್ತದೆ.

ಸಾರ್ವಜನಿಕ ಸಹಾಯದಿಂದ ಕಟ್ಟಿದ ವೀರಾಜಪೇಟೆ ಬಾಡಗ ಈಶ್ವರಿದವಸ ಭಂಡಾರವನ್ನು ತೆರೆಯುವ ಉತ್ಸವವು ತಾ. 26-2-45 ರಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು. ಈ ಸಂದರ್ಭದಲ್ಲಿ ಖಾದಿ ಪ್ರಚಾರ, ನಿಷಾನಿಶೇಧ ಮೊದಲಾದುವುಗಳ ವಿಚಾರ ಭಾಷಣಗಳನ್ನೂ, ಹರಿಕಥಾಶ್ರೇಷ್ಠ ಶ್ರೀ. ಬಿ. ಕೆ. ಗೋಪಾಲದಾಸರ ಹರಿಕಥೆಯನ್ನೂ ಏರ್ಪಡಿಸಿರುವರು.

ಹುದಿಕೇರಿಯಲ್ಲಿರುವ ಶ್ರೀ ಕಿರಿಯಮಾಡ ಬೆಳ್ಯಪ್ಪನವರ ಸಹೋದರಿಯನ್ನು ಅಜ್ಜಿಕುಟ್ಟಿರ ಮನೆಗೆ ವಿವಾಹ ಮಾಡಿಕೊಡಲು ನಿಶ್ಚಯವಾಗಿತ್ತೆಂದೂ ಆದರೆ ಹುಡುಗಿಗೆ ಈ ಏರ್ಪಾಡಿನ ಬಗ್ಗೆ ಇಷ್ಟವಿರಲಿಲ್ಲವಾದ ಕಾರಣ ಒಂದು ಪತ್ರ ಬರೆದಿಟ್ಟು ಮನೆಯಲ್ಲಿ ಗುಂಡುಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡಿರುವದಾಗಿ ತಿಳಿಯಬರುತ್ತದೆ.

[ಇಂಥಾ ಪ್ರಸಂಗ ಇದೇ ಹೊಸದಲ್ಲ. ಇನ್ನಾದರೂ ಮುಕ್ಕಳ ತಂದೆ ತಾಯಿಗಳು ಯಾ ಪೋಷಕರು ತಮ್ಮ ಆಶ್ರಯದಲ್ಲಿರುವವರನ್ನು ದಬ್ಬಿದ ಮೂಕದನಗಳಂತೆ ತಮ್ಮ ಮನಬಂದವರಿಗೆ ಮದುವೆಮಾಡಿ ಕೊಡುವ ಯಾ ತರುವ ಪಾಶವಿ ಪದ್ಧತಿಯನ್ನು ನಿಲ್ಲಿಸಿ ಮದುವೆಯಾಗುವವರ ಅಭಿಪ್ರಾಯಕ್ಕೆ ಬಿಟ್ಟು ಮೇಲ್ಕಂಡ ರೀತಿಯ ದಾರುಣಹತ್ಯೆಗೆ ಕಾರಣರಾಗಬಾರದು.

ಸಂ.]

ಕೊಡಗಿನಲ್ಲಿ ಬಿಳಿಯ, ಕೆಂಬಣ್ಣ, ಮುಳ್ಳಬತ್ತವನ್ನು ರೂಪಾಯಿಗೆ 9 ಸೇರಿಗೆ ಕಡಿಮೆಯಿಲ್ಲದೆಯೂ ಅಕ್ಕಿಯನ್ನು 4 ಸೇರಿಗೆ ಕಡಿಮೆಯಿಲ್ಲದೆಯೂ ಮಾರಬೇಕೆಂದು ನಿಯಂತ್ರಿಸಲಾಗಿದೆ.

ಅಮ್ಮತ್ತಿಯಲ್ಲಿ ತಾ. 6-2-45 ರಲ್ಲಿ ಹೊಸದಾಗಿ ಒಂದು ಕ್ರೀಡೋಪಯುಕ್ತ ಮೈದಾನವನ್ನು ತೆರೆಯಲಾಗಿದೆ.

ತಾ. 7-2-45 ರಲ್ಲಿ ನಡೆದ ಸೆಂಟ್ ಎಲೋಸಿಯಸ್ ಕಾಲೇಜ್ ಸೋತಿಯಲ್ ನಲ್ಲಿ ವಾಕ್‌ಸ್ಪರ್ಧೆಯಲ್ಲಿ ಶ್ರೀ. ಮುಕ್ಕಾಟೆರ ಗಣಪತಿಯವರಿಗೂ, ನಾಟಕ ನಟನೆಯಲ್ಲಿ ಶ್ರೀ. ಐಚೆಟ್ಟೆರ ಐಯ್ಯಪ್ಪನವರಿಗೂ ಬಹುಮಾನಗಳು ದೊರೆತವೆಂದು ತಿಳಿಯಬರುತ್ತದೆ.

ತಾ. 22-2-45 ನೇ ಗುರುವಾರ ಮೂರ್ನಾಡಿನಲ್ಲಿ ದಿವಂಗತ ಹರಿದಾಸ ಅಪ್ಪಚ್ಚಕವಿಗಳ ಸ್ಮಾರಕ ನಿಧಿಯ ವಿಠಂಗೂ, ಕೊಡವ ವಿದ್ಯಾಭಿವೃದ್ಧಿನಿಧಿಯ ಮಹಾಸಭೆಯೂ ರಾ. ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕೊಡಗು ಜಿಲ್ಲಾ ಬೋರ್ಡಿನ ವಿಠಂಗು ತಾ. 9-2-45 ರಲ್ಲಿ ನಡೆಯಿತು. ಆದರ ಕಾರ್ಯವಿವರವನ್ನು ಮುಂದಿನ ವಾರ ಕೊಡಲಾಗುವದು.

ಟಿರಪಲ್ ಫಂಡ್ಸ್ ಕಮಿಟಿಯ ಚುನಾವಣೆಗೆ ಮಡಿಕೇರಿಗೆ ರಾ. ಸಾ. ಪಾಂಡಂಡ ಚಂಗಪ್ಪ, ಕೆ. ನಂಜಪ್ಪ, ಎಸ್. ಸಿ. ಬಿದ್ದಪ್ಪ. ಬಿ. ಕೆ. ಮೂರ್ತಿ ಇವರುಗಳೂ, ವೀರಾಜಪೇಟೆಗೆ ಶ್ರೀಗಳಾದ ಎಸ್. ಎಂ. ಅಚ್ಚಯ್ಯ ಮತ್ತು ಬಿ. ಐ. ಕರುಂಬಯ್ಯನವರೂ ಉಮೇದುವಾರರಾಗಿ ನಿಂತಿದ್ದಾರೆ.

ತಾ, 23 ನೇ ಶುಕ್ರವಾರ ಸಾಯಂಕಾಲ 8-15 ಗಂಟೆಗೆ ಭಾರತ ವಾಚನ ಮತ್ತು 24 ನೇ ಶನಿವಾರ ಸಾಯಂಕಾಲ 8-15 ಗಂಟೆಗೆ ಸಂಗೀತದ ಕಾರ್ಯಕ್ರಮವನ್ನು ಮೈಸೂರು ಆಕಾಶವಾಣಿಯಲ್ಲಿ ಮಡಿಕೇರಿ ಹೈಸ್ಕೂಲು ವಿದ್ಯಾರ್ಥಿಯಾದ ಶ್ರೀ. ಕೋಟೆರ ಎಂ. ಮೇದಪ್ಪನವರು ಮಾಡುವರು.

ನೆರವಂಡ ಅಪ್ಪಚ್ಚು ಸ್ಮಾರಕ ಹಾಕಿ ಕಪ್ಪಿನ ಪರಿದ್ಯಾಟವು ತಾ. 15-2-45 ರಿಂದ ಮಡಿಕೇರಿ ಎತ್ಲೆಟಿಕ್ ಎಸೋಸಿಯೇಶನ್ ಆಶ್ರಯದಲ್ಲಿ ಪ್ರಾರಂಭವಾಗಿದೆ. ಪ್ರಥಮ ದಿನದ ಆಟದಲ್ಲಿ ಮಡಿಕೇರಿ ವಾಂಡರರ್ಸ್ ಕ್ಲಬ್ಬಿನವರು ವೀರಾಜಪೇಟೆ ಟೀಮನ್ನು ಸೋಲಿಸಿದರು.

1942ರಲ್ಲಿ ಅಮೇರಿಕಾ ಸ್ತ್ರೀಯರು ತುಟಿಯ ಬಣ್ಣ, ಮುಖಪೌಡರ್ ಮುಂತಾದ ಖುಷಾಮತ್ತುಗಳಿಗೆ 180 ಕೋಟಿ ರೂ. ವ್ಯಯ ಮಾಡಿರುವರು.

ಪ್ಯಾರಿಸ್ಸಿನವರು ಬೆಕ್ಕನ್ನು ತಿನ್ನುತ್ತಿದ್ದಾರೆ. ಈಗಾಗಲೇ ಅಲ್ಲಿಯೂ 30 ಸಾವಿರ ಬೆಕ್ಕುಗಳು ಮಾಯವಾಗಿವೆಯಂತೆ. ಒಂದು ಬೆಕ್ಕಿನ ಕ್ರಯ 30 ಶಿಲಿಂಗು ಮಾಂಸಕ್ಕೆ 15 ಶಿಲಿಂಗು-ತೊಗಲಿಗೆ 15 ಶಿಲಿಂಗು.

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. **ನಿಕಾಫ್ ಟೂತ್ ಪೌಡರ್.** ಬೆಲೆ ಪೊಟ್ಟಣ ಒಂದಕ್ಕೆ 0–1–0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)

2. **ಪಾಮುರಿ ಚೂರ್ಣ** .... ಬೆಲೆ ಪೊಟ್ಟಣ ಒಂದಕ್ಕೆ 0–6–0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)

3. **ಬಾಲವಧಿನಿ ಮಿಶ್ರಣ** .... ಬೆಲೆ ಬಾಟ್ಲಿ ಒಂದಕ್ಕೆ 1–4–0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)

4. **ದ್ರಾಕ್ಷಾರಿಷ್ಟ** .... ಬೆಲೆ ಒಂದು ಬಾಟ್ಲಿಗೆ 2–6–0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—

ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಶೀತಾರಾಮಕಾಫಿಪುಡಿ

ಯಾವುದೊಂದು ಮಿಶ್ರಣ ವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.

ಶೀತಾರದಾ ಕಾಫಿ ವರ್ಕ್ಸ್
ಮಂಗಳೂರು ಪೋಸ್ಟ್ ಬಾಕ್ಸ್ ನಂ. 273

16)

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

12) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಪುಟ್ಟಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.
ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್ಫೋ—ಮೂಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಡಿಸುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೂಲ್ಟ್, ಹೆಪೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್ಫೇಟ್ ಹೆಪ್ಸಿನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.
19)

ಸರಕಾರದ ಅನೀತಿ.

ಕೇಂದ್ರ ಎಸೆಂಬ್ಲಿಯಲ್ಲಿ ನಡೆದ ಚರ್ಚೆಗಳಲ್ಲಿ ಕೆಲವು ಮನನೀಯ ವಿಚಾರಗಳು ಹೊರಬಿದ್ದಿವೆ. ಯುದ್ಧ ಪ್ರಚಾರದಲ್ಲಿ ಸರಕಾರವು ಅಸಾಧ್ಯವಾದ ಧುಂದುವೆಚ್ಚವೂಡುತ್ತಿದೆಯೆಂದೂ, ಕೇಂದ್ರ ಸರಕಾರದ 3 ಕೋಟಿ ರೂಪಾಯಿಗಳನ್ನು ಬಂಗಾಳ ಸರಕಾರದ ನಿರಾಕರಣಧೋರಣೆಯ ಹೆಸರಿನಲ್ಲಿ ಹಾಳುಮಾಡಲಾಗಿದೆಯೆಂದೂ, ಇದಕ್ಕೆ ಸರಿಯೂವ ಲೆಕ್ಕಪತ್ರಗಳೇ ಇಲ್ಲವೆಂದು ತಿಳಿದುಬಂದಿದೆ. ಸರಕಾರದ ಅರ್ಥಸಚಿವರು ಈ ತಪ್ಪನ್ನು ಒಪ್ಪಿಕೊಂಡು ಅದನ್ನು ವಿಚಾರಿಸುವದಾಗಿ ಭರವಸೆಯಿತ್ತರು. ರಾಷ್ಟ್ರೀಯ ಸಂರಕ್ಷಣಾಬಾಂಡುಗಳನ್ನು ಮೂರುವದರಲ್ಲಿ ಅಧಿಕಾರಿಗಳು ಕೆಲವು ಕಡೆ ಅನುಸರಿಸಿದ ನೀತಿಯು ಹೊರಬಂತು. (1) ಪ್ರತಿಯೊಬ್ಬ ತಂದೆಯು ತನ್ನ ಶಾಲೆಗೆ ಹೋಗುವ ಮಕ್ಕಳಿಗೆ ತಲೆ ಒಂದರ ರೂ. 20 ರಂತೆ ಸಂರಕ್ಷಣಾಖರಾರು ಪಡೆಯಬೇಕು. ಇಲ್ಲದಿದ್ದರೆ ಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶವಿಲ್ಲ. (2) ಪ್ರತಿಯೊಬ್ಬ ಕೋವಿ ಲೈಸನ್ಸ್ ದಾರನು ವರ್ಷಕ್ಕೆ 200 ರಿಂದ 500 ರ ವರೆಗಿನ ಸಂರಕ್ಷಣಾಖರಾರು ಕೊಂಡು ಕೊಳ್ಳಬೇಕು. ಇಲ್ಲದಿದ್ದರೆ ಲೈಸೆನ್ಸ್ ದೊರೆಯದು. (3) ಎರಡು ವ್ಯಾಪಾರಸ್ಥರು ರೂ. 10000 ದಂತೆ ಕರಾರುಪಡೆಯಬೇಕೆಂದು ಅಧಿಕಾರಿಗಳು ಒತ್ತಾಯಮಾಡಲು ಅವರು ಅಷ್ಟು ಶಕ್ತಿಯಿಲ್ಲವೆಂದೂ 1000 ರೂಪಾಯಿಗಳಂತೆತೆಗೆದುಕೊಳ್ಳುವೆವೆಂದು ಹೇಳಿದರೂ ಅಧಿಕಾರಿಗಳು ಒಪ್ಪದೆ ಈ ಬಗ್ಗೆ ಕೋರ್ಟಿನಲ್ಲಿ ಮುಕದಮ್ಮೆಯೂಡಿ ಜಡ್ಜರು ಅಧಿಕಾರಿಗಳನ್ನು ಎಚ್ಚರಿಸಿದರು ಎಂಬ ಉದಾಹರಣೆಯೂ ಬಂತು. (4) ಕಂದಾಯ ವಸೂಲಾತಿಮಾಡುವಾಗ ಸ್ವಲ್ಪ ಹಣವನ್ನು ಸಂರಕ್ಷಣಾಖರಾರಿಗೆ ಉಪಯೋಗಿಸಿ ಬಾಕಿ ಹಣ ತರಲು ರೈತರನ್ನು ಒತ್ತಾಯಮಾಡುವರು. ಹಣತಾರದಿದ್ದರೆ ರಶೀತಿಕೊಡದೆ ಸತಾಯಿಸುವದು. (5) ಸಂರಕ್ಷಣಾಖರಾರು ಪಡೆಯಲಾರದ ಬಡವರಿಕ್ಕಿದ ಬಸ್ಕಿ ತೆಗೆಸುವದು ಇವೇ ಮೊದಲಾದ ಸರಕಾರ ಅಧಿಕಾರಿಗಳು ಕೈಕೊಳ್ಳುವ ಅನೀತಿಗಳು ಬಹಿರಂಗವಾದುವು

———

ಟೆಂಡರು ನೋಟೀಸು.

ಅನೆಚೌಕೂರು ಮತ್ತು ಮೂವ್ವಕೂಟ ಟೋಲು ಗೇಟುಗಳ 1945–46 ನೇ ವರ್ಷದ ಕಂಟ್ರಾಕ್ಟಿನ ಬಗ್ಗೆ ಈ ಕೆಳಗಿನ ಅಡ್ವೈಸಿಗೆ ತಾ. 28–2–45 ರೊಳಗೆ ಸೀಲು ಮೂಡಿ ಕವರಿನಲ್ಲಿ ಖಾಯಿಸ್ ಇರುವ ಕಂಟ್ರಾಕ್ಟುದಾರರು ತಮ್ಮ ಟೆಂಡರುಗಳನ್ನು ಕಳುಹಿಸಬಹುದು. ಮೂವ್ವ ಕೂಟಕ್ಕೆ ಟೆಂಡರು ಕಳುಹಿಸುವವರು ತಮ್ಮ ಅರ್ಜಿಯ ಜೊತೆಯಲ್ಲಿ ರೂ. 10/–, ಅನೆಚೌಕೂರಿನ ಟೆಂಡರುದಾರರು ರೂ. 25/– ನ್ನೂ ಠೇವಣಾತಿ ಹಣವಾಗಿ ಕಳುಹಿಸಬೇಕು. ಹೆಚ್ಚು ಮೊಬಲಗಿನ ಟೆಂಡರು ದಾರರ ಅರ್ಜಿಯನ್ನು ಅಂಗೀಕರಿಸಲಾಗುವದು. ಈ ಬಗ್ಗೆ ಪ್ರೆಸಿಡೆಂಟರ ತೀರ್ಮಾನವೇ ಕಡೇ ತೀರ್ಮಾನವಾಗುವದು. ಅಂಗೀಕರಿಸಲ್ಪಡದ ಟೆಂಡರುದಾರರ ಡಿಪಾಜಿಟ್ಟು ಹಣವನ್ನು ವಾಪಸು ಮೂಡಲಾಗುವದು. ಟೆಂಡರುಗ ಫಲಿತಾಂಶವನ್ನು ತಾ. 1–3–45 ರಲ್ಲಿ ಪ್ರಕಟಿಸಲಾಗುವದು. ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಬೋರ್ಡು ಆಫೀಸಿನಿನೆಲ್ಲಿ ಯಾ ನಾಡುಖಜೇದಿಗಳಲ್ಲಿ ತಿಳಿದು ಕೊಳ್ಳಬಹುದು.

ಪ್ರೆಸಿಡೆಂಟ್,
ಕೊಡಗು ಜಿಲ್ಲಾ ಬೋರ್ಡು, ಮಡಿಕೇರಿ.

—೦೦—

ಬೇಕಾಗಿದ್ದಾರೆ.

ಕಂಪೋಸಿಂಗ್, ಬೈಂಡಿಂಗ್, ಪ್ರೀ ಟಿಂಗುಗಳಲ್ಲಿ ಯೋಗ್ಯ ಮೂರು ಜನರನ್ನು ತರಬೇತುಮಾಡಿ, ದಕ್ಷರೆಂದು ಕಂಡುಬಂದರೆ 'ಕೊಡಗು' ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ಸಂಸ್ಥೆಯಿಂದ ಲೋವರ್ ಸೆಕೆಂಡರಿ ತೇರ್ಗಡೆಯಾದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ತಮ್ಮ ಸ್ವಂತ ಬರಹದಿಂದ ಅರ್ಜಿಮಾಡಬೇಕು. ಆರಿಸಲ್ಪಟ್ಟವರಿಗೆತರಬೇತುಮುಗಿಯುವ ವರೆಗೆ ವಿದ್ಯಾರ್ಥಿವೇತನ ಕೊಡಲಾಗುವದು. ತರಬೇತಿನ ಅವಧಿ ಒಂದು ವರ್ಷವಾಗಿದೆ. ಖಾಯಿಸ್ ಇರುವವರು ತಾ. 28–2–45 ರೊಳಗೆ ಈ ಪತ್ರಿಕೆಗೆ ಬರೆಯಬಹುದು.

ಮೆನೇಜರ್.
'ಕೊಡಗು' ಮಡಿಕೇರಿ.

ನಂಬಿಕೆಗರ್ಹವಾದ ಸಂಸ್ಥೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.
ಮೂರು ವರ್ಷಗಳ ಜಿನ್ ಲಾಭ 1,50,88,092.
ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿಸಿದೆ.
ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%
ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ–ಬೊಂಬಾಯಿ.
ಶಾಖೆ–'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.
ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವರೋಡು, ಮಂಗಳೂರು.

The Canara Banking Corporation Limited.

(Incorporated in British India Liablity of Members is Limited)

14) ETD—1906.

Head Office: U D I P I, South Kanara.

Authorised Capital	....	Rs. 25,00,000
Issued & Subcribed Capital	....	Rs. 16,00,000
Paid up capital	....	Rs. 14,76,355
Reserves	....	Rs. 4,14,302

TOTAL WORKING CAPITL Exceed:
ONE CRORE & 35 LAKHS

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

18) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

55) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಿದೆ
	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
	ಆಸ್ತಿ	೬,೩೦,೪೬,೯೦೦ ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಆಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವಪಿನೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: ಪೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,

52) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸಂಪ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,000, ಜಮಾ ಬಂದ ಕ್ಷೇಮನಿಧಿ 2,24,755 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಕ್ಷೇಮನಿಧಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara. for 'Kodagu' Ltd.

"ಜರ್ಮನಿಯು ಬೇಗ ಸೋಲಲಿಕ್ಕಿಲ್ಲ"

ಭೂಮಧ್ಯ ಸಮುದ್ರದ ಮೇಲೆ ರಷ್ಯನರ ದೃಷ್ಟಿ?

ಪೂರ್ವ ಬಂಗಾಳದ ಮೇಲೆ ಬಾಂಬು.

ಲೇ:— 'ಗುಪ್ತ.

ಪಶ್ಚಿಮ ರಣರಂಗದ ಅಂದರೆ ಜರ್ಮನಿಯ ಯುದ್ಧವು ಮುಗಿಯುತ್ತಾ ಬಂತು ಎಂದು ವಾರ್ತೆಗಳು ಸಾರುತ್ತಿದ್ದರೂ ಯುದ್ಧದ ಅಂತ್ಯ ಇನ್ನೂ ಕಣ್ಣಿಗೆ ಕಾಣುತ್ತಿಲ್ಲ. ಪೂರ್ವ ಭಾಗದಿರದ ಮುಂದೊತ್ತಿ ಬರ್ಲಿನಿನ ಮೇಲೆ ಆಕ್ರಮಣ ಮಾಡಲು ಬರುತ್ತಿರುವ ರಷ್ಯಾಯೋಧ ಮಾರ್ಷಲ್ ಝುಕೋವಿನ ಗುಂಡುಗಳ ಶಬ್ದ ಕೇಳಿಸುತ್ತಿದ್ದರೂ ಯುದ್ಧ ಇಲ್ಲಿ ಅಂತ್ಯಗೊಳ್ಳುವ ಚಿಹ್ನೆ ಇಲ್ಲ. ಪಶ್ಚಿಮದಲ್ಲಿ ಸೀಜ್‌ಫ್ರೈಡ್ ಲೈನನ್ನು ಭೇದಿಸಿರುವೆನೆಂದು ಹೇಳಿಕೊಳ್ಳುವ ಮಿತ್ರರ ಮುಂದೆ ಇನೇ ಬಂದರೂ ಹಿಂಜರಿಯನೆಂಬ ಧೃತಿಯಿಂದ ನಿಂತಿರುವ ರಂಡ್‌ಸ್ಟೆಟನನ್ನು ನೋಡಿದರೆ ಈ ಭಾಗದಲ್ಲಿಯೂ ಯುದ್ಧ ಶೀಘ್ರ ಕೊನೆಗೊಳ್ಳುವ ಚಿಹ್ನೆ ಕಂಡು ಬರುವದಿಲ್ಲ. ಎಂದಿಗಿಂತಲೂ ಹಿರಿದಾದ ವೀರತನದಿಂದ ಇಟಲಿ ಗಡಿಯಲ್ಲಿ ಕಾದುತ್ತಿರುವ ಕೆಸರ್‌ಲಿಂಗನ ಭಾಗದಲ್ಲೂ ಯುದ್ಧಾಂತ್ಯದ ಚಿಹ್ನೆಗಳು ಕಂಡು ಬಾರವು. ಆದಥೂ ಯುದ್ಧ ಬೇಗ ಅಂತ್ಯವಾಗಲಿದೆ ಎಂಬ ಕೂಗು ಮಾತ್ರ ಸಾರ್ವತ್ರಿಕ ಹಬ್ಬಿದೆ.

ಯುದ್ಧದ ಪ್ಲಾನೂನನ್ನನುಸರಿಸಿ ಲೆಕ್ಕ ಹಾಕಿ ನೋಡಿದರೆ ಜರ್ಮನಿಯು ಖಂಡಿತವಾಗಿಯೂ ಸೋಲಿಸಲ್ಪಟ್ಟಿದೆ. 1918ಕ್ಕಿಂತಲೂ ಸ್ಥಮೂಲವಾಗಿ ಸೋಲಿಸಲ್ಪಟ್ಟಿದೆಯೆಂದು ಮಿತ್ರ ಪಕ್ಷದ ಅನೇಕರು ಲೆಕ್ಕ ಹಾಕುತ್ತಿದ್ದಾರೆ. 1918ರಲ್ಲಿ ಲಿಂಡನ್‌ಬರ್ಗನು ಮಿತ್ರರೊಡನೆ ಒಪ್ಪಂದ ಮಾಡಿಕೊಂಡು ಶರಣಾಗತನಾದಾಗ ಇಂದಿನ ದಾರುಣಸ್ಥಿತಿ ಜರ್ಮನಿಗೆ ಬಂದಿರಲಿಲ್ಲ. ಇಂದು ಮಿತ್ರ ದಂಡುಗಳು ಜರ್ಮನಿಯ ಹಲವು ನಗರಗಳನ್ನು ನಾಶಮಾಡಿ ಪೂರ್ವ ಫ್ರುಶ್ಯಾ ಮೊದಲಾದ ಭಾಗಗಳು ನೂರಾರು ಮೈಲುಗಳ ವರೆಗೆ ರಷ್ಯಾ ಪಾದ ಕ್ರಾಂತವಾಗಿವೆ. ಮಿಲಿಯಂತರ ಜರ್ಮನ್ ಜನರು, ಹೆಂಗಸು ಮಕ್ಕಳು ದಿಕ್ಕಿಲ್ಲದೆ, ಒಡಲು ದಾರಿಯಿಲ್ಲದೆ ಕಷ್ಟಪಡುತ್ತಿದ್ದಾರೆ. ಜರ್ಮನ್ ಮುಖ್ಯ ನಗರವಾದ ಬರ್ಲಿನೇ ಗಂಡಾಂತರದಲ್ಲಿದೆ. ಅದ್ದರಿಂದ ಇಂದು ಜರ್ಮನರು ಸರ್ವನಾಶವಾದಂತೆ ಆಗಿದೆಯೆಂದು ಪ್ರಚಾರ ನಡೆದಿದೆ.

ಆದರೆ ತನಗೆ ಸೋಲಾಗಿದೆಯೆಂದು ಹಿಟ್ಲರನು ಒಪ್ಪಿಕೊಳ್ಳುತ್ತಿಲ್ಲ. ಸುತ್ತು ರಣ ದೇವತೆಯ ಭೀಭತ್ಸ ನಾಟಕ ನಡೆಯುತ್ತಿದ್ದರೂ ಧೃತಿಗೆಡದೆ ಇನ್ನೂ ಜನರನ್ನು ಹುರಿದುಂಬಿಸಿ ರಣರಂಗಕ್ಕೆ ತುರುಬ್ಬಿತ್ತಿದ್ದಾನೆ. ಜರ್ಮನಿಯ ಜೀವನ ಮರಣ ಸಮಸ್ಯೆಯು ದೆಂದು ಸಾರಿ ಜಯವು ತನಗೇ ಬರುವೆದೆಂದು ಭರವಸೆ ಕೊಡುತ್ತಿದ್ದಾನೆ. ಹಿಟ್ಲರನ ಅನುಯಾಯಿಗಳೂ ಯೋಧರೂ ಕೂಡ ಧೈರ್ಯದಿಂದಲೇ ಹೋರಾಡುತ್ತಿದ್ದಾರೆ. ಹಿಟ್ಲರನಲ್ಲಿ ಅನನ್ಯ ನಂಬಿಕೆಯನ್ನು ಅವರು ಇಟ್ಟಿದ್ದಾರೆ. ಯಾವ ರಣರಂಗದಲ್ಲೂ ಧೃತಿಗೆಟ್ಟು ಅವರು ಮಾನಸಿಕ ಆಸ್ಥಿರತೆಯನ್ನು ಕಳೆದುಕೊಂಡಿಲ್ಲ. ನಿಮಗೆ ಸೋಲು ಬಂದಿದೆಯೆಂದು ಮಿತ್ರರು ಸಾರುತ್ತಿದ್ದರೂ ಅವರು ಸೋಲನ್ನು ಒಪ್ಪುತ್ತಿಲ್ಲ! ಬದಲು ಬಿರುಸಾಗಿ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಹಿಟ್ಲರನು ಜರ್ಮನಿಯ ಪ್ರಚಾರ ಮಂತ್ರಿ ಗೇಬಲ್ಸನನ್ನು ಬರ್ಲಿನ್ ನಗರ ರಕ್ಷಣೆಯ ದಳದ ಮುಖ್ಯ ಸೇನಾನಿಯೊಗಿ ನೇಮಿಸಿದ್ದಾನೆ. ಬರ್ಲಿನ್ ಮಿತ್ರರ ವಶವಾದರೂ ಸಹ ಯುದ್ಧ ಮುಗಿಯದು. ಕಡೆಯ ವರೆಗೆ ಪ್ರತಿಭಟಿಸುವದಾಗಿ ಜರ್ಮನರು ನಿರ್ಧರಿಸಿದಂತೆ ಕಂಡುಬರುತ್ತದೆ.

ಜರ್ಮನರು ತಮ್ಮ ಆಂತರಿಕ ವ್ಯವಸ್ಥೆ ಮಾಡಿಕೊಂಡು ರಷ್ಯನರನ್ನು ಹಿಂದಕ್ಕಟ್ಟುವ ಪ್ರಯತ್ನ ಮಾಡುತ್ತಿರುವರು. ಈ ದೃಷ್ಟಿಯಿಂದ ತಮ್ಮ ಬರ್ಲಿನ್ ನಗರ ಸೈನ್ಯ ನಿಕ್ಷೇಪದಿಂದ ಕೆಲವು ಪಡೆಗಳನ್ನು ಈ ರಂಗಕ್ಕೆ ಕಳುಹಿಸಿದ್ದಾರೆ ಎಂದಾಗ ಹಲವರಿಗೆ ಆಶ್ಚರ್ಯವಾಗಬಹುದು. ನೀರಿನಲ್ಲಿ ಮುಳುಗುವ ಮನುಷ್ಯ ತನಗೆ ದೊರೆಯುವ ಹುಲ್ಲು ಕಡ್ಡಿಯನ್ನೂ ಬಲವಾಗಿ ಹಿಡಿಯಲು ಯತ್ನಿಸಿದಂತೆ ಜರ್ಮನರ ಈ ಪ್ರಯತ್ನವೆಂದು ಜನರು ಅನ್ನಲೂ ಬಹುದು ಆದರೆ ಅವರ ಸಾಹಸವನ್ನು ಮತ್ತು ಧ್ಯೇಯ ಸಾಧನೆಗಾಗಿ ಅವರು ಮಾಡುತ್ತಿರುವ ಅಸಮಾನ ತ್ಯಾಗವನ್ನು ಯಾರೂ ಹೊಗಳಲೇ ಬೇಕು. ಜರ್ಮನಿ ಯುದ್ಧವು ಬೇಗ ಮುಗಿದೀತೆಂದು ಆಶಿಸಬಹುದು. ನಿರ್ಧಾರವಾಗಿ ಹೇಳಲು ಮಾತ್ರ ಸಾಧ್ಯವಿಲ್ಲ. ಯೂರೋಪದರಾಷ್ಟ್ರರಾಷ್ಟ್ರಗಳನ್ನು ಪಾದಕ್ರಾಂತ ಮಾಡಿದ ಜರ್ಮನರನ್ನು ತಡೆದು ಜರ್ಮನಿಯನ್ನೇ ವಶಪಡಿಸಿಕೊಳ್ಳಲು ಯತ್ನಿಸುತ್ತಿರುವ ರಷ್ಯನರ ಶಕ್ತಿಯು ಗುಟ್ಟೇನು? ಎಂದು ಕೆಲವರು ನಮ್ಮನ್ನು ಪ್ರಶ್ನೆ ಕೇಳುತ್ತಿದ್ದಾರೆ. ಇದಕ್ಕೆ ಸುಲಭದರಲ್ಲಿ ಉತ್ತರ ಕೊಡುವುದಾದರೆ—ರಷ್ಯಾವು ವಿಶಾಲವಾದ ದೇಶ. ಫಲವತ್ತಾದ ಪ್ರದೇಶ. ಜನಜೀವನಕ್ಕೆ ಬೇಕಾಗುವ ಸರ್ವ ಪದಾರ್ಥಗಳು ಅಲ್ಲೇ ಬೆಳೆಯುತ್ತವೆ. ಯುದ್ಧಕ್ಕೆ ಬೇಕಾದ ಯೋಧರೂ ಸಾಕಷ್ಟು. ಸಂಖ್ಯೆಯಲ್ಲಿ ದೊರೆಯುತ್ತಾರೆ. ಆಧುನಿಕ ರೀತಿಯ ಶಸ್ತ್ರಾಸ್ತ್ರಗಳ ತಯಾರಿಯೂ ಸಾಕಷ್ಟು ಆಗುತ್ತಿದೆ. ಯಾವುದೇ ವಸ್ತುವಿಗಾಗಿ ಬೇರೆ ರಾಷ್ಟ್ರದ ಕಡೆ ಅದು ನೋಡುವ ಹಾಗಿಲ್ಲ. ರಷ್ಯಾವು ಆಹಾರ ಪದಾರ್ಥಗಳ ಸಂಪತ್ತಿನಿಂದ ತುಂಬಿದೆ. ಯಾಂತ್ರಿಕ ಸಂಪದ್ಯುಕ್ತ ರಾಷ್ಟ್ರವೆಂದು ಮೆರೆಯುತ್ತಿದೆ. ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವವನ್ನೂ ತ್ಯಜಿಸುವ ವೀರ ಯೋಧರನ್ನೂ ಹೊಂದಿದೆ. ಇಂಥಾ ರಷ್ಯಾಕ್ಕೆ ಜಯ ದೊರೆಯದೆ ಮತ್ತಾರಿಗೆ?

ಪ್ರತ್ಯಕ್ಷ ರಣ ರಂಧನವನ್ನು ಅನಲೋಕಿಸಿದ್ದ ರಷ್ಯನರ ಮುನ್ನಡೆ ಈಗ ನಿಧಾನವಾಗಿದೆ. ದಿನಕ್ಕೆ ಹತ್ತಿಪ್ಪತ್ತು ಮೈಲುಗಳಂತೆ ಮುಂದೆ ಸಾಗುತ್ತಿದ್ದವರು ವಾರಕ್ಕೆ ಹತ್ತು ಮೈಲು ಸಾಗುವದು ಕಷ್ಟವಾಗಿ ಪರಿಣಮಿಸಿದೆ. ಪಶ್ಚಿಮದಲ್ಲಿ ಮಿತ್ರರೂ ಹೇಳಿಕೊಳ್ಳುವಷ್ಟು ಮುಂದೆ ಬಂದಿಲ್ಲ ಸೀಜ್‌ಫ್ರೈಡ್ ಗೋಡೆಯನ್ನು ಭೇದಿಸಲಾಗಿದೆಯೆಂದು ಒಂದು ವಾರ್ತೆ ಬಂದಿತ್ತು. ಆ ಗೋಡೆಯು ಎಲ್ಲಿಯೂ ಭೇದಿಸಲ್ಪಡಲಿಲ್ಲವೆಂದು ಪುನಹ ಹೇಳಲಾಗಿದೆ. ಹೀಗೆ ಯಾವ ಕ್ಷೇತ್ರದಲ್ಲೂ ಜರ್ಮನರ ಕೈ ಕಳೆದ ಕೆಲವೆರಿನಗಳಂತೆ ಸಡಿಲಾಗಿರುವದು ಕಂಡುಬರುವದಿಲ್ಲ.

ಹೇಗೂ ಕ್ರಮಶಃ ಮುಂದರಿಯುತ್ತಿರುವ ರಷ್ಯನರ ಬಗ್ಗೆ ಹಲವು ತರ್ಕ ಭಯವು ಮಿತ್ರ ಶಿಬಿರದಲ್ಲಿ ಹುಟ್ಟಿಕೊಳ್ಳತೊಡಗಿದೆ. 'ಪೋಲೆಂಡಿನ ಸಮಸ್ಯೆಯ ಬಗ್ಗೆ ಉಂಟಾದ ಭಿನ್ನಭಾವವು ಇನ್ನೂ ಸರಿಹೋಗಿಲ್ಲ ಈಗ ರಷ್ಯನರು ಭೂಮಧ್ಯಪ್ರದೇಶದಲ್ಲಿ ತಮ್ಮ ಹಕ್ಕು ಸ್ಥಾಪಿಸಲು ಆಶಿಸುತ್ತಿದ್ದಾರೆಂದು ವಾರ್ತೆ ಇದೆ. ಭೂಮಧ್ಯ ಸಮುದ್ರದಲ್ಲಿ ರಷ್ಯಾ ಹಡಗುಗಳು ಓಡಾಡುವ ಮತ್ತು ಕೆಲವು ಕಂಠಾವಳಿ ಸ್ಥದೇಶಗಳನ್ನು ವಶಪಡಿಸಿಕೊಳ್ಳುವ ಅಭಿಲಾಷೆ ಅವರಿಗಿರುವುದಂತೆ. ಇದು ನಿಜವಾದರೆ ಮತ್ತೊಂದು ಯುದ್ಧಕ್ಕೆ ಬಹಳ ವರ್ಷ ಕಾಯುವುದು ಅಗತ್ಯವಿಲ್ಲವೆನ್ನಬಹುದು.

ಪೂರ್ವ ಭಾಗದಲ್ಲಿ ಅಂದರೆ ಜಪಾನಿನ ಕದನದಲ್ಲಿ ಈ ವೊರ ಹೆಚ್ಚಿನ ಪ್ರಗತಿಯೂಗಿರುವದು ಕಂಡುಬರುವದಿಲ್ಲ. ಫಿಲಿಪ್ಪೈನ್ಸ್ ದ್ವೀಪವು ಸಂಪೂರ್ಣವಾಗಿ ಮಿತ್ರರ ವಶವಾಯಿತೆನ್ನಬಹುದು. ಮುಂದೆ ಸೇನಾನಿ ಮೆಕಾರ್ಥರವರು ಎಲ್ಲಿ ಕಾಲಿಡಬಹುದೆಂದು ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲ. ತಾನು ಟೋಕಿಯೋದ ಕಡೆಗೆ ಸಾಗುವದಾಗಿ ಮೆಕಾರ್ಥರು ಹೇಳುತ್ತಾರೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂಬುವುದನ್ನು ಮುಂದೆ ನೋಡಬೇಕು. ಈ ಮಧ್ಯೆ ಜಪಾನರ ವಿಮಾನವೊಂದು ಪೂರ್ವ ಬಂಗಾಳದ ಮೇಲೆ ಬಂದು ವಿಮಾನಧಾಳಿ ಮಾಡಿದೆ. ಕೇವಲ ಒಂದೆರಡೇ ಬಾಂಬುಗಳನ್ನು ಹಾಕಿತೆಂದೂ ಇದ್ದರಿಂದ ಹೆಚ್ಚಿನ ನಷ್ಟವಾಗಿಲ್ಲವೆಂದೂ ವರದಿಗಳು ತಿಳಿಸುತ್ತವೆ. ಇತ್ತ ಮಿತ್ರ ದಂಡುಗಳು ಬರ್ಮಾದಲ್ಲಿ ಮುನ್ನುಗ್ಗಿ ಮಂಡಲೆಯ ಮೇಲೇರಿ ಹೋಗತೊಡಗಿವೆ. ಪೂರ್ವ ಭಾಗದ ಯುದ್ಧವು ಇನ್ನೂ ಬಿರುಸಿನಿಂದ ನಡೆಯುತ್ತಿಲ್ಲ. ಬರ್ಮಾದಲ್ಲಿ ಜಪಾನರಿಗೆ ಇದು ಮುಖ್ಯ ಕೇಂದ್ರವಾಗಿರುವದರಿಂದ ಇದನ್ನು ಅವರು ಸುಲಭದಲ್ಲಿ ಬಿಟ್ಟು ಕೊಡಲಿಕ್ಕಿಲ್ಲ. ಇಲ್ಲಿ ಯಾವ ರೀತಿಯ ಪ್ರತಿಭಟನೆಯನ್ನು ಕೊಟ್ಟಾರೆಂಬುದನ್ನು ಮುಂದೆ ನೋಡಬೇಕಿದೆ.